106 (272) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರು) (ಆಹಾರ ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕುಡಿಯುವ ನೀರಿನ ಟಾಸ್ಕಾಫೋರ್ಸ್‌ನಲ್ಲಿ ಬೇಸಿಗೆಯಲಲಿ ಕೈಗೊಂಡ ಕಾಮಾಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆಯೇ;

ಆ. ಉಡುಪಿ ತಾಲ್ಲೂಕಿನಲ್ಲಿ ಕೈಗೊಂಡ ಕಾಮಾಗಾರಿಗಳು ಯಾವುವು ಹಾಗೂ ಬಿಡುಗಡೆಯಾದ ಅನುದಾನ ಎಷ್ಟು

(ಕ್ಷೇತ್ರವಾರು ವಿವಿರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ನಾಗರಿಕ ಸರಬರಾಜು, ಗ್ರಾಹಕರವ್ಯವಹಾರಗಳು ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು)

ಅ. ಕುಡಿಯುವ ನೀರಿಗಾಗಿ ಕಾರ್ಯಪಡೆ ಅನುಮೀದನೆಯೊಂದಿಗೆ ಗ್ರಾಮೀಣ ಪ್ರದೇಶಗಳ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ಬಿಲ್ ಪಾವತಿ ಸಲುವಾಗಿ ರಾಜ್ಯ ಮತ್ತು ಕೇಂದ್ರ ವಲುಗಳಡಿ ಪ್ರಸಕ್ತ ಸಾಲಿನಲ್ಲಿ ಬಿಡುಗೆರಯಾಾರುವ ಅನುದಾನ ಉಪಯೋಗಿಸಲು ಸೂಚನೆ ನೀಡಿದೆ.

ಆ. ಉಡುಪಿ ತಾಲ್ಲೂಕಿನಲ್ಲಿ ಒಟ್ಟು 43 ಕುಡಿಯುವ ನೀರಿನ ಕಾಮಗಾರಿಗಳು ಮಂಜೂರಾಗಿರುತ್ತವೆ, ಈ ಸಲುವಾಗಿ ರೂ. 22.95 ಲಕ್ಷ ಬಿಡುಗಡೆಯಾಗಿದ್ದು ಸದರಿ ಅನುದಾನ ಕೆಳಕಂಡತೆ ಕ್ಷೇತ್ರವಾರು ವೆಚ್ಚವಾಗಿದೆ. (ರೂ.ಲಕ್ಷಗಳಲ್ಲಿ)

ಕ್ಷೇತ್ರದ ಹೆಸರು	ಕಾಮಗಾರಿಗಳಸಂಖ್ಯೆ	ಬಿಡುಗಡೆಯಾದ	ಒಟ್ಟು ಖರ್ಚು
ಉಡುಪಿ	17	6.15	6.15
ಕಾಪು	13	5.58	5.58
ಬ್ರಹ್ಮಾವರ	13	11.22	11.22
ಒಟ್ಟು	**43**	**22.95**	**2.95**

107 (277) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರು) (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯಗಳ ಕರಾವಳಿ ಜಿಲ್ಲೆಗಳಲ್ಲಿರುವ ಮೀನುಗಾರಿಕೆ ಬಂದರು/ಜೆಟ್ಟಗಳ ಹೂಳು ತೆಗೆಯುವಿಕೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ:

ಆ) ಇದಕ್ಕಾಗಿ ಅನುದಾನ ಮೀಸಲಿಡಲಾಗಿದೆಯೇ (ಪ್ರಗತಿಯ ವಿವರ ನೀಡುವುದು)?

ಆ. ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ. ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿರುವ ಮೀನುಗಾರಿಕಾ ಬಂದರು ಮತ್ತು ಜಟ್ಟಿಗಳ ನಿರ್ಮಾಣದ ಅವಧಿಯಲ್ಲಿ ಅಗತ್ಯವಿರುವಲ್ಲಿ ಹೊಳೆತ್ತುವ ಕಾಮಗಾರಿ ಕೈಗೊಳ್ಳಲಾಗಿದೆ ನಂತರದಲ್ಲಿ ಹೂಳಿನ ಸಮಸ್ಯೆ ಉಂಟಾಗಿರುವ ಬಂದರು ಮತ್ತು ಇಳಿದಾಣಗಳಲ್ಲಿ ಹೊಳೆತ್ತುವ ಬಗ್ಗೆ ಪೂರ್ವಭಾವಿ ಕ್ರಮವನ್ನು ಕೈಗೊಳ್ಳಲಾಗಿದೆ.

ಆ. ಇದಕ್ಕಾಗಿ ಸಾಂಕೇತಿಕ ಅನುದಾನವನ್ನು ಒದಗಿಸಲಾಗಿದೆ. ಪ್ರಸ್ತುತ ನಿರ್ಮಾಣವಾಗುತ್ತಿರುವ ಗಂಗೊಳ್ಳಿ ಮಿನುಗಾರಿಕೆ ಬಂದರಿನಲ್ಲಿ ಹೊಳೆತ್ತುವ ಕಾಮಾಗಾರಿಯನ್ನು ಪ್ರಾರಂಭಿಸಲಾಗಿದೆ ಹೊನ್ನಾವರ ಮೀನುಗಾರಿಕೆ ಬಂದರು ಹಾಗೂ ಹಜಮಾಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಹೂಳಿನ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಅಧ್ಯಯನ ನಡೆಸಲು ಪುಣೆಯಲ್ಲಿರುವ ಸಿ.ಡಬ್ಲ್ಯೂ.ಪಿ. ಆರ್.ಎಸ್. ಸಂಸ್ಥೆಯನ್ನು ಕೋರಲಾಗಿದೆ. ತದಡಿ ಮೀನುಗಾರಿಕೆ ಬಂದರು ಹಾಗೂ ತೆಂಗಿನಗುಂಡಿ ಇಳಿದಾಣ ಕೇಂದ್ರದಲ್ಲಿ ಹೊಳೆತ್ತುವ ಕಾಮಗಾರಿಕಗೆ ಅಸೈಡ್ (ASIDE) ಯೋಜನೆಯಡಿ ಧನಸಹಾಯ ಪಡೆಯಲು ಕ್ರಮವಹಿಸಲಾಗಿದೆ.

108 (168) ಶ್ರೀ ಸಿ.ಬಿ. ಕೃಷ್ಣಬೈರೆಗೌಡ (ವೇಮಗಲ್) (ತೋಟಗಾರಿಕೆ ಸಚಿವರು)

ಅ. ಭಾರತದಿಂದ ಮಾವಿನ ಹಣ್ಣನ್ನು ಇತ್ತೀಚೇಗೆ ಆಮದು ಮಾಡಿ ಕೊಳ್ಳಲು ಅಮೇರಿಕಾ ದೇಶ ಒಪ್ಪಿರುವುದುನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ?

ಆ. ಇದರಿಂದ ರೈತರಿಗೆ ವರದಾನವಾಗಬಹುದಾದಂತಹ ಈ ಅವಕಾಶವನ್ನು ಬಳಸಿಕೊಳ್ಳಲು ರಾಜ್ಯ ಸರ್ಕಾರ ಅಥವಾ ಸಂಸ್ಥೆಗಳು ಏನು ಕ್ರಮ ಕೈಗೊಂಡಿವೆ?

ಶ್ರೀ ಬಂಡೆಪ್ಪಾ ಕಾಶಂಪೂರ್ (ತೋಟಗಾರಿಕೆ ಸಚಿವರು) :

ಹೌದು

ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿವೆ:

1) ಮಾವಿನಲ್ಲಿ ಕೀಟ/ರೋಗಗಳನ್ನು ನಿಯಂತ್ರಿಸಿ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಉತ್ಪಾದಸಲು ರೈತರಿಗೆ ಸಸ್ಯ ಸಂರಕ್ಷಣ ಔಷಧಿಗಳು ಮತ್ತು ಸಿಂಪರಣಾ ಉಪಕರಣಗಳನ್ನು ಖರೀದಿಸಲು ಸಹಾಯಧನ ನೀಡಲಾಗುತ್ತಿದೆ.

2) ಮಾವು ಬೆಳೆಗಾರರ ಅನುಕೂಲಕೊಸ್ಕರ ರಫ್ತು ಗುಣ ಮಟ್ಟದ ಹಣ್ಣುಗಳನ್ನು ಉತ್ಪಾದಿಸಲು ಪ್ರಮುಖ ಮಾವು ಬೆಳೆಯುವ ಪ್ರದೇಶಗಳಲ್ಲಿ ತರಬೇತಿ/ ಕಾರ್ಯಗಾರಗಳನ್ನು ಏರ್ಪಡಿಸಲಾಗಿರುತ್ತದೆ.

3) ರಫ್ತು ಮಾಡುವ ಪ್ರಕ್ರಿಯೆ ಬಗ್ಗೆ ತಿಳಿವಳಿಕೆ ಮತ್ತು ಮಾರ್ಗದರ್ಶನ ನೀಡಲು Karnataka Agriculture Produce Processing and Export Coppretion, Agricultural and Pricessed Food Products Export Development Authority ಸಂಸ್ಥೆಗಳು ಮತ್ತು ಖಾಸಗಿ ರಫ್ತುದಾರರ ಸಹಯೋಗವನ್ನು ಕಲ್ಪಿಸಲಾಗಿದೆ.